ಹಾಲಿನ ಸಂಘಗಳನ್ನು ಪ್ರಾರಂಭಿಸುವ ಬಗ್ಗೆ

೯೫೪. ಶ್ರೀ ಆರ್. ವೆಂಕಟರಾಮಯ್ಯ(ಮುಳಬಾಗಿಲು). —ಮಾನ್ಯ ರೇಷ್ಮೆ, ಪಶುಸಂಗೋಪನಾ ಮತ್ತು ಮುಜರಾಯಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಳಬಾಗಿಲು ಮತ್ತು ಬಂಗಾರಪೇಟೆ ತಾಲ್ಲೂಕುಗಳಲ್ಲಿ ಹಾಲಿನ ಸಹಕಾರ ಸಂಘಗಳು ಇಲ್ಲದೇ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಸದರಿ ತಾಲ್ಲೂಕುಗಳಲ್ಲಿ ಸಂಘಗಳನ್ನು ಈಗಾಗಲೇ ನೋಂದಣಿ ಆಗಿರುವುದು ನಿಜವೇ,

ಇ) ಹಾಗಿದ್ದಲ್ಲಿ, ಸದರಿ ಸಂಘಗಳನ್ನು ಪ್ರಾರಂಭಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು,

ಈ) ಪ್ರಸಕ್ತ ವರ್ಷದಲ್ಲಿಯಾದರೂ ಸದರಿ ತಾಲ್ಲೂಕುಗಳಲ್ಲಿ ಎಷ್ಟು ಸಂಘಗಳನ್ನು ಪ್ರಾರಂಭಿಸಲಾಗುವುದು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ಸಹಕಾರ ಸಂಘಗಳನ್ನು ಸ್ಥಾಪಿಸಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ನಿಜ.

ಇ) ಶೀಥಲೀಕರಣ ಸಂಸ್ಕರಣ ಅಭಾವದಿಂದಾಗಿ ಪ್ರಾರಂಭಿಸಲಾಗುತ್ತಿಲ್ಲ.

ಈ) ಶೀಥಲೀಕರಣ ಸಂಸ್ಕರಣ ಸಾಮರ್ಥ್ಯದಲ್ಲಿ ಹೆಚ್ಚಳವಾದ ನಂತರ ಹಾಲಿನ ಸಹಕಾರ ಸಂಘಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಬೈಲಹೊಂಗಲದಲ್ಲಿ ಇಂಡಸ್ಟ್ರಿಯಲ್ ಶೆಡ್ ಕಟ್ಟುವ ಬಗ್ಗೆ

೮೭೧. ಶ್ರೀ ಶಿವಾನಂದ ಹೆಚ್. ಕಾಜಲಗಿ (ಬೈಲಹೊಂಗಲ).—ವಾಣಿಜ್ಯ ಕೈಗಾರಿಕಾ ಮಂತ್ರಿ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದವರು ಬೆಳಗಾಂವ ಜಿಲ್ಲೆಯ ಬೈಲಹೊಂಗಲದಲ್ಲಿ ಕೈಗಾರಿಕಾ ಶೆಡ್‌ಗಳನ್ನು ಕಟ್ಟಲು ಯಾವಾಗ ನಿವೇಶನವನ್ನು ಸ್ವಾಧೀನಪಡಿಸಿ ಕೊಂಡರು ಮತ್ತು ಅದರ ವಿಸ್ತೀರ್ಣವೆಷ್ಟು, ಆ ಬಗ್ಗೆ ನೀಡಲಾದ ಹಣವೆಷ್ಟು

ಆ) ಮೇಲಿನ ನಿವೇಶನವನ್ನು ಏಕರೇವಾರು ಅಭಿವೃದ್ಧಿ ಪಡಿಸಲು ತಗುಲಿದ ಖರ್ಚು ಎಷ್ಟು ?

ಇ) ನಿವೇಶನವನ್ನು ಪಡೆದ ನಂತರ ಶೆಡ್‌ಗಳನ್ನು ಕಟ್ಟಲು ಟೆಂಡರನ್ನು ಏಂದು ಕರೆಯಲಾಯಿತು,

ಈ) ಸದರಿ ಶೆಡ್‌ಗಳ ಕಟ್ಟಡ ಕಟ್ಟಲಾಗಿರುವುದೇ,

ಉ) ಹಾಗಿದ್ದಲ್ಲಿ ಯಾವಾಗ ಕಟ್ಟಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಮೊದಲಿಗೆ ಸರ್ವೆ ನಂ. ೨೮೭ರಲ್ಲಿ ೮ ಎಕರೆ ೨೪ ಗುಂಟೆಗೆ ವಿಸ್ತೀರ್ಣದ ಜಾಗವನ್ನು ಡಿಸೆಂಬರ್ ೧೯೮೨ನೇ ಇಸವಿಯಲ್ಲಿ ಒದಗಿಸಲಾಗಿತ್ತು. ಜಮೀನಿಗೆ ನೀಡಲಾದ ಹಣ ೩.೮೭೦-೦೦ ತದನಂತರ ಬೈಲಹೊಂಗಲ ಉಪ ವಿಭಾಗಾಧಿಕಾರಿಯವರು ಸದರಿ ಜಮೀನನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಆಸ್ಪತ್ರೆ ಕಟ್ಟುವ ಸಲುವಾಗಿ ಕೊಟ್ಟರು. ಆದಕಾರಣ ಸದರೀ ಜಮೀನಿಗೆ ಬದಲಾಗಿ ಬೈಲಹೊಂಗಲ ಉಪ ವಿಭಾಗಾಧಿಕಾರಿಯವರು ಸರ್ವೆ ನಂ. ೨೫೩ರಲ್ಲಿ ೮ ಎಕರೆ ವಿಸ್ತೀರ್ಣವುಳ್ಳ ಜಾಗವನ್ನು ಒದಗಿಸಿದ್ದಾರೆ. ಸದರಿ ಜಾಗವನ್ನು ದಿನಾಂಕ ೧-೭-೧೯೮೫ರಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಸ್ವಾಧೀನಕ್ಕೆ ತೆಗೆದುಕೊಂಡಿದೆ.

ಆ) ಅಭಿವೃದ್ಧಿಗಾಗಿ ಯಾವ ಖರ್ಚನ್ನೂ ಮಾಡಿರುವುದಿಲ್ಲ.